# ಶ್ರದ್ಧ

## ಹಿರಿಮೆಗೊಂದು ಮೆಟ್ಟಿಲು




ಹಿರಿಮೆಯೆಡೆಗೆ
ಪ್ರತಿಯೊಂದು ಮಗುವೂ
ಪ್ರತಿಯೊಂದು ತರಗತಿಯೂ
ಪ್ರತಿಯೊಂದು ವಿದ್ಯಾಲಯವೂ

## ಎಲ್.ಪಿ. ವಿಭಾಗ

## LP SECTION

# ಮುನ್ನುಡಿ

ಕೇರಳದ ಶೈಕ್ಷಣಿಕ ಕ್ಷೇತ್ರದಲ್ಲಿ ಹೊಸ ಚೇತನವನ್ನು ಮೂಡಿಸಿಕೊಂಡು ಸಾರ್ವಜನಿಕ ಶಿಕ್ಷಣ ಸಂರಕ್ಷಣಾ ಯಜ್ಞ ಮುಂದುವರಿಯುತ್ತಿದೆ. ಭೌತಿಕವಾದ ಕ್ಷೇತ್ರಗಳಲ್ಲಿ ಹಿಂದೆದೂ ಇಲ್ಲದ ಬದಲಾವಣೆಗಳು ಉಂಟಾಗುತ್ತಿದೆ. ಈ ಕ್ಷೇತ್ರದಲ್ಲಿ ವಿವಿಧ ಏಜನ್ಸಿಗಳು ನಡೆಸುವ ಚಟುವಟಿಕೆಗಳು ಸಾರ್ವಜನಿಕ ಕ್ಷೇತ್ರದಲ್ಲಿ ಆಸಕ್ತಿಯನ್ನೂ ಆವೇಶವನ್ನೂ ಬೆಳೆಸಿಕೊಂಡು ಹೊಸಮಟ್ಟಕ್ಕೆ ಅಭಿವೃದ್ಧಿಹೊಂದುತ್ತಿದೆ.

ಪ್ರತಿಯೊಬ್ಬ ವಿದ್ಯಾರ್ಥಿಯ ನೈಸರ್ಗಿಕವಾದ ಸಾಮರ್ಥ್ಯಗಳು, ಅಭಿರುಚಿಗಳನ್ನು ಅಭಿವೃದ್ಧಿಪಡಿಸಿ ಅವರನ್ನು ಹಿರಿಮೆಗೆ ತಲುಪಿಸಲು ಸಾಧ್ಯವಾದರೆ ಶಿಕ್ಷಣದ ಗುರಿ ಪೂರ್ತಿಯಾಗುವುದು. ಕಲಿಕಾ ಸಮಸ್ಯೆಗಳನ್ನು ಅಭಿಮುಖೀಕರಿಸುವ ಪ್ರತಿಯೊಂದು ಮಗುವಿಗೂ ನೀಡಬೇಕಾದ ಆವಶ್ಯಕತೆ ಇದೆ. ಈ ಲಕ್ಷ್ಯ ಕಂಡುಕೊಂಡು ಸಾರ್ವಜನಿಕ ಶಿಕ್ಷಣ ಇಲಾಖೆ ಕಳೆದ ಶೈಕ್ಷಣಿಕ ವರ್ಷ ಜಾರಿಗೊಳಿಸಿದ ಚಟುವಟಿಕೆಯಾಗಿದೆ ಶ್ರದ್ಧ– ಹಿರಿಮೆಗೊಂದು ಮೆಟ್ಟಲು.

ಈ ವರ್ಷ 3 ರಿಂದ 10ರ ವರೆಗಿರುವ ತರಗತಿಗಳ ಮಕ್ಕಳನ್ನು ಉದ್ದೇಶಿಸಿ ಚಟುವಟಿಕೆಗಳನ್ನು ಯೋಜನೆ ಮಾಡಿರುವುದು.

ಶ್ರದ್ಧ ಕಾರ್ಯಕ್ರಮವನ್ನು ನಡೆಸುವುದಕ್ಕಾಗಿ ಶಾಲೆಯ ಪೂರ್ಣ ಶಿಕ್ಷಕವೃಂದದ ಭಾಗವಹಿಸುವಿಕೆ ಅತೀ ಅಗತ್ಯವಾಗಿದೆ. ಪಿ.ಟಿ.ಎ. ಎಸ್.ಎಂ.ಸಿ. ಜನಪ್ರತಿನಿಧಿಗಳು, ಹಳೆವಿದ್ಯಾರ್ಥಿಗಳು, ವಿವಿಧ ಸಂಘಸಂಸ್ಥೆಗಳು, ರಕ್ಷಕರು, ಮೊದಲಾದವರ ಸಹಾಯವನ್ನು ಕೇಳಿಕೊಳ್ಳುತ್ತಿದ್ದೇವೆ.

ಎಲ್ಲಾ ವಿದ್ಯಾರ್ಥಿಗಳೂ ಕಲಿಕಾ ಹಿರಿಮೆಗೆ ತಲುಪಿಸುವುದಕ್ಕಾಗಿ ನಾವೆಲ್ಲರೂ ಜೊತೆಯಾಗಿ ಮುಂದುವರಿಯುವ

**ಪ್ರಾಂಶುಪಾಲರು**
ಡಯಟ್ ಕಾಸರಗೋಡು

# ಅನುಕ್ರಮಣಿಕೆ


| | | |
|---|---|---|
| 'ಶ್ರದ್ಧ' – ಹಿರಿಮೆಗೊಂದು ಮೆಟ್ಟಲು | – | 5 – 8 |
| ಇಂಗ್ಲೀಷ್ | – | 9 – 30 |
| ಕನ್ನಡ | – | 31 – 58 |
| ಗಣಿತ | – | 59 – 106 |
| ಪರಿಸರ ಅಧ್ಯಯನ | – | 107 – 133 |

# 'ಶ್ರದ್ಧ' ಹಿರಿಮೆಗೊಂದು ಮೆಟ್ಟಿಲು

## 'ಶ್ರದ್ಧ' ದೃಷ್ಟಿಕೋನ

ಮಗು ಆರೋಗ್ಯದಿಂದ ಬೆಳೆಯುವುದು, ಉತ್ತಮ ರೀತಿಯಲ್ಲಿ ಕಲಿಯುವುದು, ಉತ್ತಮ ವ್ಯಕ್ತಿಯಾಗಿಯೂ, ಸಮಾಜದ ವ್ಯಕ್ತಿಯಾಗಿಯೂ ಬೆಳೆಯುವುದು ಎಲ್ಲಾ ರಕ್ಷಕರ ಮತ್ತು ಅಧ್ಯಾಪಕರ ಉದ್ದೇಶವಾಗಿದೆ. ಮನೆಯಿಂದಲೂ ಶಾಲೆಯಿಂದಲೂ ಲಭಿಸುವ ಪೂರ್ವ ನೈಪುಣ್ಯಗಳು ಬೆಳವಣಿಗೆಯಲ್ಲಿಯೂ ವಿಕಾಸದಲ್ಲಿಯೂ ಇರುವ ಸಮಸ್ಯೆಗಳು ಸಹಜವಾದ ಆಸಕ್ತಿಗಳು ಎಂಬಿವುಗಳು ಪ್ರತಿಯೊಂದು ಮಗುವಿನ ಮತ್ತು ಇತರ ಮಕ್ಕಳಿಗಿಂತ ವ್ಯತ್ಯಸ್ಥವಾಗಿದೆ. ಅಳತೆಯಲ್ಲಿಯೂ ಗುಣಮಟ್ಟದಲ್ಲಿಯೂ ಈ ವ್ಯತ್ಯಸಗಳನ್ನು ಗರಿಷ್ಠವಾಗಿ ಪರಿಗಣಿಸಿಕೊಂಡು ಪ್ರತಿಯೊಂದು ಮಗುವಿಗೂ ಕಲಿಕೆಯ ಮೂಲಕ ಉತ್ತಮ ರೀತಿಯಲ್ಲಿ ಬೆಳೆಯುವುದು ಮತ್ತು ಅಭಿವೃದ್ಧಿಹೊಂದುವುದು ಸಾರ್ವಜನಿಕ ಶಿಕ್ಷಣ ಸಂರಕ್ಷಣಾ ಯಜ್ಞ ನೀಡುವ ಪ್ರಾಧಾನ್ಯತೆಯಾಗಿದೆ.

ಮಕ್ಕಳ ವ್ಯತ್ಯಸ್ಥತೆಗಳನ್ನು ಪರಿಗಣಿಸದೆ ಇರುವಾಗ ಅವರಿಗೆ ಕಲಿಕಾ ಹಿಂದುಳಿಯುವಿಕೆ ಉಂಟಾಗುತ್ತಿದೆ. ಅಂಥಹ ಮಕ್ಕಳಿಗೆ ಸಾಮಾನ್ಯವಾಗಿಯೂ ವಿವಿಧ ವಿಷಯಗಳಲ್ಲಿಯೂ ಪ್ರತ್ಯೇಕವಾಗಿಯೂ ಬೇಕಾದ ಕಲಿಕಾ ಬೆಂಬಲ ಏನು ಎಂದು ಅಧ್ಯಾಪಕ ಸಮೂಹ ಒಂದು ಮಟ್ಟದ ತನಕ ವಿಶ್ಲೇಷಿಸಿ ಕಂಡುಕೊಳ್ಳಬೇಕಾಗಿದೆ. ಆದರೆ ಶಾಲಾ ತರಗತಿಗಳಲ್ಲಿ ಬೆಂಬಲ ನೀಡುವುದಕ್ಕಿರುವ ಚಟುವಟಿಕೆಗಳು, ವಸ್ತುಗಳನ್ನು ಕಂಡುಕೊಂಡು ಸಜ್ಜುಗೊಳಿಸುವುದರಲ್ಲಿ ಅಧ್ಯಾಪಕರು ಹಲವು ಸಮಸ್ಯೆಗಳನ್ನು ಕಂಡುಕೊಳ್ಳುತ್ತಿದ್ದಾರೆ. ಶ್ರದ್ಧ ಕಾರ್ಯಕ್ರಮ ಕಲಿಕೆಯಲ್ಲಿ ಸಮಸ್ಯೆಇರುವ ಮಕ್ಕಳನ್ನು ಕಂಡುಕೊಳ್ಳುವುದು ಅವರನ್ನು ಮುಂದಕ್ಕೆ ತಲುಪಿಸುವುದಕ್ಕೆ ಸಹಕಾರಿಯಾಗುವ ಕಲಿಕಾ ಬೆಂಬಲವನ್ನು ನೀಡುವುದನ್ನು ಲಕ್ಷ್ಯವಿರಿಸಿದೆ.

## 'ಶ್ರದ್ಧ' ಸಮೀಪನ

ನನಗೂ ತರಗತಿಯಲ್ಲಿ ಒಂದು ಸ್ಥಾನವವಿದೆ. ನನ್ನ ತಿಳುವಳಿಕೆ ಇಲ್ಲಿ ಪರಿಗಣಿಸಲ್ಪಡುತ್ತಿದೆ ಎಂದು ಪ್ರತಿಯೊಂದು ಮಗುವಿಗೂ ತಿಳಿಯುವಾಗ ಕಲಿಕೆಯಲ್ಲಿ ಪೂರ್ಣವಾದ ಭಾಗವಹಿಸುವಿಕೆ ಉಂಟಾಗುತ್ತದೆ. ಅವರು ಕಲಿಕೆಗೆ ತಯಾರಾಗುತ್ತಾರೆ. ಅಂಥಹ ಒಂದು ಕಲಿಕಾ ವಾತಾವರಣ ಸೃಷ್ಟಿಸುವಾಗ ಕಲಿಕೆಯು ಕಾರ್ಯದಕ್ಷತೆಯನ್ನು ಪಡೆಯುತ್ತದೆ ಎಂದು ಅಧ್ಯಾಪಕ ವೃಂದ ತಿಳಿದುಕೊಂಡಿದೆ. ಆದುದರಿಂದ ಶ್ರದ್ಧ –ಹಿರಿಮೆಗೊಂದು ಮೆಟ್ಟಿಲಾಗಿಸುವುದಕ್ಕಾಗಿ ಕೆಲವು ದೃಢ ತೀರ್ಮಾನಗಳನ್ನು ನಾವು ನಡೆಸುವ.

1. ಮಗುವನ್ನು ಕ್ಷಮೆಯಿಂದ ಕೇಳುತ್ತೇನೆ ಮತ್ತು ಸಮೀಪಿಸುತ್ತೇನೆ.
2. ಅಭಿಪ್ರಾಯಗಳು ಮತ್ತು ಹೇಳಲು ಪ್ರತಿಯೊಂದು ಮಗುವಿಗೆ ಅವಕಾಶವನ್ನು ನೀಡುತ್ತೇನೆ.
3. ಪ್ರತಿಯೊಂದು ಹಂತದಲ್ಲಿ ಅಧ್ಯಾಪಕನೆಂಬ ನೆಲೆಯಲ್ಲಿ ನನಗೆ ಉಂಟಾದ ತಿಳುವಳಿಕೆಗಳು ಮುಂದಿನ ಚಟುವಟಿಕೆಗಳಿಗಾಗಿ ಉಪಯೋಗಿಸಿಕೊಳ್ಳುತ್ತೇನೆ.
4. ನನ್ನ ಶಬ್ಧಕ್ಕಿಂತ ಹೆಚ್ಚಾಗಿ ಮಕ್ಕಳ ಶಬ್ಧ ಎಲ್ಲಾ ಸಂದರ್ಭಗಳಲ್ಲಿ ದೊಡ್ಡದಾಗಿ ಕೇಳುವ ರೀತಿಯಲ್ಲಿ ಚಟುವಟಿಕೆಗಳನ್ನು ನಡೆಸುತ್ತೇನೆ.
5. ಮಗುವಿನ ಪ್ರತಿಯೊಂದು ಸಾಮರ್ಥ್ಯವನ್ನು ಪ್ರೋತ್ಸಹಿಸುತ್ತೇನೆ.
6. ಮಗುವಿನ ಸಾಮಾಜಿಕವೂ ಕುಟುಂಬಪರವೂ ಆದ ಹಿನ್ನೆಲೆ ನಾನು ತಿಳಿದುಕೊಂಡು ಹೆಚ್ಚಿನ ಸಹಾಯಗಳನ್ನು ನೀಡುತ್ತೇನೆ.
7. ಚಟುವಟಿಕೆಗಳಲ್ಲಿ ಎಲ್ಲರಿಗೂ ಭಾಗವಹಿಸುವಿಕೆಗೆ ಅವಕಾಶವನ್ನು ನೀಡುತ್ತೇನೆ. ವೈಯಕ್ತಿಕ ಶ್ರದ್ಧೆಯನ್ನು ನೀಡುತ್ತೇನೆ.
8. ವಿಶೇಷ ಸಾಮರ್ಥ್ಯಗಳನ್ನು ಕಂಡುಕೊಂಡು ಪ್ರೋತ್ಸಾಹ ನೀಡುತ್ತೇನೆ.
9. ಕಲಿಕಾ ಅಭಿವೃದ್ಧಿಯನ್ನು ರಕ್ಷಕರಿಗೆ ನಿರಂತರ ತಿಳಿಸುತ್ತೇನೆ. ಮಕ್ಕಳಿಗೆ ಬೆಂಬಲ ನೀಡುವುದಕ್ಕಾಗಿ ಸಜ್ಜುಗೊಳಿಸುತ್ತೇನೆ.
10. ಎಲ್ಲರಿಗೂ ಸಮಾನ ಪರಿಗಣನೆಯನ್ನು ನೀಡುತ್ತೇನೆ.
11. ಶಿಶು ಸೌಹಾರ್ದ ಸಮೀಪನವನ್ನು ಸ್ವೀಕರಿಸುತ್ತೇನೆ.

ಶ್ರದ್ಧ ಕಾರ್ಯಕ್ರಮದ ಆರಂಭದ ಹಂತದ ಚಟುವಟಿಕಾ ಅನುಭವಗಳು, ಅಧ್ಯಾಪಕರು ತಯಾರಿಸಿದ ಮೌಲಿಕವಾದ ಚಟುವಟಿಕಾರೀತಿಗಳು ಮಕ್ಕಳ ಕಲಿಕೆಯಲ್ಲುಂಟಾದ ಅಭಿವೃದ್ಧಿ ಎಂಬಿವುಗಳನ್ನು ಮೌಲ್ಯನಿರ್ಣಯಮಾಡಿದ ಅನಂತರ ಎರಡನೆಯ ಹಂತದ ಚಟುವಟಿಕೆಗಳನ್ನು ಆರಂಭಿಸಬೇಕು.

## 'ಶ್ರದ್ಧ' ಚಟುವಟಿಕೆ ರೂಪರೇಖೆ

1 ಆರಂಭ ಹಂತ ಎಂಬ ರೀತಿಯಲ್ಲಿ 3, 5, 8 ತರಗತಿಗಳ ಮಲಯಾಳ, ಇಂಗ್ಲೀಷ್, ವಿಜ್ಞಾನ ಎಂಬೀ ವಿಶಯಗಳಲ್ಲಿ ಸಮಸ್ಯೆಗಳನ್ನು ಅನುಭವಿಸುತ್ತಿರುವ ಮಕ್ಕಳಿಗಾಗಿದೆ ಪರಿಗಣನೆ.

2 ಕಾಲು ವಾರ್ಷಿಕ ಪರೀಕ್ಷಾ ಫಲಿತಾಂಶದ ವಿಶ್ಲೇಷಣೆಯ ಮೂಲಕ ಪ್ರತಿಯೊಂದು ಮಗುವೂ ಗಳಿಸಿದ ಕಲಿಕಾ ಸಾಮರ್ಥ್ಯದ ಜೊತೆಗೆ ಮಗುವಿಗಿರುವ ಸಮಸ್ಯೆಗಳು ಪ್ರತಿಯೊಬ್ಬ ಅಧ್ಯಾಪಕನೂ ಕಂಡುಕೊಂಡಿರುತ್ತಾನೆ. ಅಕ್ಟೋಬರ್ 7ನೇ ತಾರೀಕಿನಂದು ನಡೆದ ಕ್ಲಸ್ಟರ್ ತರಬೇತಿಯಲ್ಲಿ ಇದನ್ನು ಕ್ರೋಡೀಕರಿಸಿ ಕಲಿಕಾ ಬೆಂಬಲ ಅಗತ್ಯವಿರುವ ಮಕ್ಕಳನ್ನು ಕಂಡುಕೊಳ್ಳಲಾಗಿದೆ.

3, 5, 8 ತರಗತಿಗಳಲ್ಲಿ ಈರೀತಿಯಲ್ಲಿ ಕಂಡುಕೊಂಡ ಮಕ್ಕಳನ್ನು ವ್ಯತ್ಯಸ್ತ ಗುಂಪುಗಳಲ್ಲಿ ಶ್ರದ್ಧ ಕಲಿಕಾ ಬೆಂಬಲ ಕಾರ್ಯಕ್ರಮ ನಡೆಸಬೇಕಾದ್ದು. ಪ್ರತಿಯೊಂದು ಮಗುವಿಗೆ ಅರ್ಹವಾದ ಬೆಂಬಲ ಲಭಿಸಬೇಕಾಗಿರುವುದರಿಂದ ಆಯಾ ತರಗತಿಯ ಮಕ್ಕಳ ಸಂಖ್ಯೆ 25ಕ್ಕಿಂತ ಹೆಚ್ಚಿದ್ದರೆ ಒಂದಕ್ಕಿಂತ ಹೆಚ್ಚು ಕಲಿಕಾ ಗುಂಪುಗಳನ್ನಾಗಿಸಲು ಮರೆಯಬಾರದು.

3 ಶ್ರದ್ಧ ಕಾರ್ಯಕ್ರಮದ ಮೊದಲ ಹಂತ ಅಕ್ಟೋಬರ್ 24ರಂದು ಆರಂಭಿಸಿ

ಅರ್ಧವಾರ್ಷಿಕ ಪರೀಕ್ಷೆಗಿಂತ ಮೊದಲು ಮುಗಿಯುವ ರೀತಿಯಲ್ಲಿ ಕಾರ್ಯಕ್ರಮವನ್ನು ತಯಾರಿಸಿರುವುದು. 24–10–2017 ರಿಂದ 27–10–2017ರ ತನಕ ವಿವಿಧ ಹಂತಗಳಲ್ಲಿ ಶ್ರದ್ಧ ಕಾರ್ಯಕ್ರಮದ ಉದ್ಘಾಟನೆ ನಡೆಯುವುದು ಶಾಲೆಯಲ್ಲಿ ಪ್ರತಿಯೊಂದು ವಿಷಯದಲ್ಲಿ ಆರಂಭದ ಹಂತದಲ್ಲಿ ಒಂದು ದಿನದ ಕ್ಯಾಂಪು ಅನಂತರ ದಿನ ಬಿಟ್ಟು ದಿನಮೂರು ದಿನಗಲ್ಲಲಿ ಒಂದು ಗಂಟೆಯಷ್ಟು ಕಾಲ ಕಲಿಕಾ ಚಟುವಟಿಕೆಗಳನ್ನು ನಡೆಸಬೇಕು. 28–10–2017ರಂದು ನಡೆಯುವ ಆರಂಭದ ಶಾಲಾಮಟ್ಟದ ಏಕದಿನ ಕ್ಯಾಂಪಿನಲ್ಲಿ ಮಾತೃಭಾಷಾಪರವಾದ ಬೆಂಬಲ ನೀಡುವುದಕ್ಕಿರುವ ಚಟುವಟಿಕೆಗಳ ಜೊತೆಗೆ ಅನಂತರದ ಮೂರು ದಿವಸಗಳಲ್ಲಿ ಭಾಷಾ ಸೆಷನ್‌ಗಳಿಗಿರುವ ತಯಾರಿ ನಡೆಯಬೇಕು. ಇದೇರೀತಿಯಲ್ಲಿ ಅನಂತರದ ವಾರಗಳಲ್ಲಿ ಯಥಾಕ್ರಮ ವಿಜ್ಞಾನ, ಇಂಗ್ಲೀಷ್, ಗಣಿತ ಎಂಬೀ ವಿಷಯಗಳಲ್ಲಿ ಚಟುವಟಿಕಾ ಅನುಭವಗಳನ್ನು ನೀಡಬೇಕು.

4 ಒಂದು ದಿನದ ಕ್ಯಾಂಪಿನಲ್ಲಿಯೂ ಅನಂತರದ ಸೆಶನ್‌ಗಳಲ್ಲಿ ನಿಶ್ಚಿತವಾದ ಕಲಿಕಾ ತಿಳುವಳಿಕೆಗಳು ಉಂಟಾಗಬೇಕು. ರಚನೆಗಳು, ಚಿತ್ರಗಳು, ತಯಾರಿಗಳು, ಗ್ರಾಫಿಕ್ ಓರ್ಗನೈಸರ್ ರಿಪೋರ್ಟುಗಳು, ವಾಚಿಕ ಪಾಠಗಳು, ಸ್ವಯಂ ವಿಶ್ಲೇಶಣೆಗಳು ಎಂಬೀ ವಿವಿಧ ಉತ್ಪನ್ನಗಳು ಪ್ರತಿಯೊಂದು ಚಟುವಟಿಕೆಗಳಲ್ಲಿ ಉಂಟಾಗಬೇಕು. ಅದು ಮಗುವಿನ ಪ್ರೊಫೈಲಿನ ಭಾಗವಾಗಬೇಕು.

5 ಪ್ರತಿಯೊಂದು ಸೆಶನ್‌ನ ಭಾಗವಾಗಿ ನನಗೆ ಹಿರಿಮೆಯೊಂದಿಗೂ, ಸಂತೋಷದೊಂದಿಗೂ ಮಾಡಲು ಸಾಧ್ಯವಾದುದು ಯಾವುದು? ಎಂದು ಆಲೋಚಿಸುವುದಕ್ಕಿರುವ ಅವಕಾಶ ಪ್ರತಿಯೊಂದು ಮಗುವಿಗೂ ಲಭಿಸಬೇಕು. ಅದನ್ನು ಹೇಳುವುದಕ್ಕಿರುವ ಮತ್ತು ದಾಖಲಿಸುವುದಕ್ಕಿರುವ ಸಮಯವನ್ನೂ ಸೆಶನ್‌ನಲ್ಲಿ ಒಳಗೊಳ್ಳಿಸಿ ಯೋಜನೆಮಾಡಬೇಕು. ಇಂಥಹಾ ಸ್ವಯಂ ಮೌಲ್ಯನಿರ್ಣಯಗಳು ಪ್ರಕ್ರಿಯೆ ಟಿಪ್ಪಣಿಯಾಗಿ ಮಗುವಿನ ಪ್ರೊಫೈಲಿನಲ್ಲಿ ದಿನಾಂಕವಿರಿಸಿ ಇರಿಸಬೇಕು. ಪ್ರತಿಯೊಂದು ಹಂತದಲ್ಲಿರುವ ಮೌಲ್ಯನಿರ್ಣಯದಲ್ಲಿ ಈ ಮೌಲ್ಯನಿರ್ಣಯ ಟಿಪ್ಪಣಿಯೂ ಇತರ ಕಲಿಕಾ ತಿಳುವಳಿಕೆಗಳು, ಕಂಡುಬರುವ ಬೆಂಬಲದ ಆವಶ್ಯಕತೆಗಳು, ಕಲಿಕಾ ಅಭಿವೃದ್ಧಿಯನ್ನೂ ಕ್ರೋಡೀಕರಿಸಬೇಕು. ಶಾಲೆಯಲ್ಲಿ ಎಲ್ಲಾ ಅಧ್ಯಾಪಕರೂ ಭಾಗವಹಿಸುವ ಎಸ್. ಆರ್.ಜಿ. ಸಭೆಯಲ್ಲಿ ಪ್ರಸ್ತುತ ಮಧ್ಯಂತರ ವರದಿಯನ್ನು ಮಂಡಿಸಬೇಕು. ಆಚರ್ಚೆ ಮುಂದಿನ ವಿಷಯದ ಒಂದುವಿನದ ಕ್ಯಾಂಪಿಗಿರುವ ತಿಳುವಳಇಕೆಗಳಿಗೆ ಮುಂದುವರಿಯಬೇಕು. ರಿಪೋರ್ಟ್ ಮಂಡನೆಯ ಮೂಲಕ ಉಂಟಾಗುವ ತಿಳುವಳಿಕೆಗಳು ಮುಂದಿನ ಚಟುವಟಿಕೆಗಳಲ್ಲಿ ಉಪಯೋಗಿಸಬೇಕು.